C.C.
18113/2024
P W-1

**ಸಾಕ್ಷಿಯನ್ನು ದಿನಾಂಕ 03.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ಓದಿದ್ದೇನೆ. ನಾನು ಬೀರೇಶ್ವರ ನಗರದ ಚುಂಚನಘಟ್ಟ ಮೇನ್ ರೋಡ್, ಕೋಣನಕುಂಟೆ ಕ್ರಾಸ್, ಬೆಂಗಳೂರು-60ರಲ್ಲಿ ವಾಸ ಇದ್ದೇನೆ. ಸದರಿ ವಿಳಾಸದಲ್ಲಿ ನಾನು ಸುಮಾರು 20ವರ್ಷಗಳಿಂದ ವಾಸ ಇದ್ದೇನೆ. ನಾನು ಬಾರ್ ಅಂಡ್ ರೆಸ್ಟೋರೆಂಟ್ ಗೆ ಕ್ಯಾಷಿಯರ್. ಕನಕಪುರದ ರಸ್ತೆಯಲ್ಲಿರುವ ಕಾರ್ತಿಕ್ ಬಾರ್ ಅಂಡ್ ರೆಸ್ಟೋರೆಂಟ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಸದರಿ ಕಲಸವನ್ನು ಹೊರತುಪಡಿಸಿ ಬೇರೆ ಯಾವುದೇ ಕೆಲಸ ಮಾಡುತ್ತಿಲ್ಲ. ನನಗೆ ಸದರಿ ಬಾರಿನಲ್ಲಿ ರೂ.25,000/-ತಿಂಗಳಿಗೆ ಸಂಬಳ ಬುರತ್ತದೆ. ಸದರಿ ಸಂಬಳದ ಬಗ್ಗೆ ಸಾಬೀತುಪಡಿಸಲು ನ್ಯಾಯಾಲಯಕ್ಕೆ ದಾಖಲೆ ಕೊಡಬಲ್ಲೆ.

2. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ಈ ಪ್ರಕರಣದ ಸಾಲದ ಬಗ್ಗೆ ನಾನು ಐಟಿಆರ್ ನಲ್ಲಿ ತೋರಿಸಿಲ್ಲ. ಸಾಲದ ಬಗ್ಗೆ ಐಟಿಆರ್ ನಲ್ಲಿ ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆರೋಪಿ ನನಗೆ ಸುಮಾರು 15ವರ್ಷಗಳಿಂದ ಪರಿಚಯ. ನಾವಿಬ್ಬರು ಒಂದೇ ಏರಿಯಾದಲ್ಲಿದ್ದೇವೆ. ಆರೋಪಿಯು ಶಾರದಾ ನಗರದಲ್ಲಿ ವಾಸ ಇದ್ದಾರೆ, ಆದರೆ ಅವರ ಮನೆಯ ವಿಳಾಸ ನನಗೆ ಗೊತ್ತಿಲ್ಲ, ಅವರ ಮನೆಯಲ್ಲಿ ಆರೋಪಿಯು ತಾಯಿ ಮತ್ತು ಹೆಂಡತಿ ಇರುವ ಬಗ್ಗೆ ಮಾತ್ರ ನನಗೆ ಗೊತ್ತು. ತಾಯಿ ಹೆಸರು ಗೊತ್ತಿಲ್ಲ, ಹೆಂಡತಿ ಹೆಸರು ಶೋಭಾ.

3. ಆರೋಪಿಯು ದಿನಾಂಕಃ17.12.2022ರಂದು ಹಣ ಕೇಳಿದರು. ಆರೋಪಿ ಮತ್ತು ಆತನ ಹೆಂಡತಿ ಇಬ್ಬರು ಶಾರದಾನಗರದಲ್ಲಿರುವ ಅಂಗಡಿಯ ಬಳಿ ಹಣ ಕೇಳಿದರು.

**ಮುಂದಿನ ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
**ಬೆಂಗಳೂರು.**